(ಇಂದು ದಿನಾಂಕ:29-11-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆ: ವಾದಿ ಪರ ವಕೀಲರ ಪರವಾಗಿ:-

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

ನಿ.ಪಿ.1	ಅಸಲು ದಾವಾ ಸಂಖ್ಯೆ 47/2010 ನೇದ್ದರ ಆದೇಶ ಪುಟದ ಧೃಢೀಕೃತ ನಕಲು
ನಿ.ಪಿ.2	ಅಸಲು ದಾವಾ ಸಂಖ್ಯೆ 87/2014 ನೇದ್ದರ ಮಧ್ಯಂತರ ಅರ್ಜಿಯ ಆದೇಶದ ಧೃಢೀಕೃತ ನಕಲು
ನಿ.ಪಿ.3	1954-55 ಸಾಲಿನ ಖಾಸ್ರಾ ಪಹಣಿ
ನಿ.ಪಿ.4	1963-64 ಸಾಲಿನ ಕೈಬರಹ ಪಹಣಿ
ನಿ.ಪಿ.5 ರಿಂದ 20	ಒಟ್ಟು 16 ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳು ಮತ್ತು ದೃಢೀಕೃತ ನಕಲುಗಳು
ನಿ.ಪಿ.21	ಒಟ್ಟು 4 ಮ್ಯೂಟೇಶನ್ ಗಳ ದೃಢೀಕೃತ ನಕಲುಗಳು
ನಿ.ಪಿ.22	ವರ್ಗ ಮುಬಾದಿಲ್ ರಜಿಸ್ಟರ್ ದೃಢೀಕೃತ ನಕಲು

ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು